ನಿಂತು ನನ್ನ ಮದಿವಿ ಮಾಡಿದರು.

ರಾಮದಾಸರಿಗೆ ಎಂಬತ್ತು ವರ್ಷ ವಯಸ್ಸಾದಾಗ ಅವರ ಮಕ್ಕಳು ಬೆಂಗಳೂರಿಗೆ ಬರಲು ಒತ್ತಾಯಿಸ್ತಾ ಇದ್ದುದರಿಂದ ಅನಿವಾರ್ಯ ಗ್ಯಾರೇಜ್ ಮಾರಲು ನಿರ್ಧರಿಸಿ ತಮ್ಮ ಕೆಲಸಗಾರರಿಗೆ ಮುಂಚಿತವಾಗೇ ಎಲ್ಲಿಯಾದ್ರೂ ಕೆಲಸ ಹುಡುಕಿಕೊಳ್ಳಲಿಕ್ಕೆ ತಿಳಿಸಿದರು.

ನಾನು ನನ್ನ ಮನಿಗೆ ನನ್ನ ಪಗಾರದಾಗ ದುಡ್ಡು ಕಳಿಸ್ತಾನೇ ಕೈಯಾಗ ನಾಕು ದುಡ್ಡು ಉಳಿಸಿಕೊಂಡಿದ್ದೆ. ಆದ್ರ ಗ್ಯಾರೇಜು ಖರೀದಿಸುವಷ್ಟು ಎಲ್ಲಿಂದ ತರಲಿ? ಆದ್ರೂ ಧೈರ್ಯ ಮಾಡಿ ನನ್ನ ಆಸೆ ಹೇಳೇಬಿಟ್ಟೆ. 'ನಾನೇ ಖರೀದಿಸ್ತೀನ್ರಿ' ಅಂದೆ.

'ಅದು ಹೇಗೋ! ಈ ದೊಡ್ಡ ಜಾಗೆಗೇ ದೊಡ್ಡ ಕಿಮ್ಮತ್ತು ಆಗತೈತಿ. ಇನ್ನು ಫ್ಯಾಕ್ಟರಿ ಸೇರಿದ್ರ ಬಾಳ ಆಗತೈತಲ್ಲ!'

'ನೀವು ಕೊಟ್ಟ ಪಗಾರದಲ್ಲೇ ಉಳಿಸಿಕೋತ ಬಂದೀನಿ. ಐದು ವರ್ಷ ಅವಕಾಶ ಮಾಡಿಕೊಟ್ರ ಹಗಲೂ ರಾತ್ರಿ ದುಡದು ಮುಟ್ಟಸ್ತೀನಿ.'

ಈಗ ಅವರೂ ಮೊದಲಿನಂಗ ಸ್ವತಂತ್ರ ಇರಲಿಲ್ಲ. ಮಕ್ಕಳನ್ನ ಕೇಳಿಕೊಂಡು ಹೇಳಿದರು. ಅಂತೂ ವ್ಯವಹಾರ ಮುಗೀತು. ಮುಚ್ಚುವ ಹಂತದಲ್ಲಿದ್ದ ಗ್ಯಾರೇಜನ್ನ ಕೆಲಸಗಾರರು ಆಗಲೇ ಬಿಟ್ಟು ಹೋಗಿದ್ದರಲ್ಲ! ಈಗ ಹೊಸದಾಗಿ ತಯಾರಿ ಮಾಡಬೇಕು, ಟಾರ್ಗೆಟ್ ಇಟಗೊಂಡು ಕೆಲಸ ಮಾಡಬೇಕು. ಇಂಥ ಹೊತ್ತಿಗೇ ಸಲೀಮ ಬಂದದ್ದು, ಆಧಾರಗಂಬವಾಗಿ ನಿಂತದ್ದು.

ಹೇಗೋ ಬದುಕುಳಿದ, ಉಪಕೃತನಾದ ತಾನು ಸಲೀಮನ ಋಣ ತೀರಿಸಿದಂಗೂ ಆಯಿತು, ನಾಕು ಮಂದಿಗೆ ಉಪಯುಕ್ತ ಆದಂಗೂ ಆಯಿತು ಅಂತ ಸ್ವಯಂ ಸೇವೆಗೆ ಅಣಿಯಾಗಿದ್ದ.

ಏನೆಲ್ಲಾ ನೆನೀತಾ, ಯೋಚಿಸ್ತಾ ಕೂತಿದ್ದ ಗಣೇಶ ಹಾರ್ನ್ ಸಪ್ಪಳಾಗಿ ಎದ್ದು ಹೊರಬಂದ. ನೋಡತಾನೆ, ತಮ್ಮ ಹಳೇ ಸ್ಕೂಟರ್ ಮ್ಯಾಲೆ ಮಳಿ ಹನಿಯಲ್ಲೇ ತೋಯ್ತಾ ಬಂದಿದ್ದ ರಿಟೈರ್ಡ್ ಪ್ರೊಫೆಸರ್ ಸಿದ್ದಪ್ಪ. ನೋಡತಲೇ ತಿಳೀತು, ಅವರ ಮನೀ ಮ್ಯಾಲಿನ ಕಟ್ಟಡಕ್ಕೆ ತಗಡು ಹೊದಿಸಿಕೊಡೋದಕ್ಕೆ ಒಪ್ಪಿಕೊಂಡು ಅಡ್ವಾನ್ಸ್ ತಗೊಂಡು ತಾನು ಮಾಡಲಾರದ್ದು. ಕೈಯಲ್ಲಿ ಕೆಲಸಗಳು ವಿಪರೀತವಾಗಿ ಮುಂದೂಡತಾ ಬಂದಿದ್ದ. ಸಲೀಮ ನೆನಪಿಟ್ಟುಕೊಂಡು, 'ಭೈಯ್ಯಾ, ಆ ಪ್ರೊಫೆಸರ್ ಕೆಲಸ ಹಾಗೇ ಉಳೀತು, ಕೊರೊನಾಬ್ಯಾರೇ ಬಂದುಬಿಟ್ಟಿತು.'

'ಇರಲಿ, ಹೊರಗಿನ ಕೆಲಸ ಸದ್ಯ ಬ್ಯಾಡ' ಅಂದಿದ್ದ. ಆಮ್ಯಾಲೆ ಕೊರೊನಾ ತೀವ್ರವಾಗಿ ಕೆಲಸಗಳೇ ನಿಂತುಬಿಟ್ಟವು.

'ಬರ್ರಿ ಬರ್ರಿ ಸರ್' ಅಂದು ಒಳಕರೆದ. 'ಮಳಿಯಾಗ ತೋಯ್ಸಿಕೊಳ್ತಾನೇ ಬಂದೀರಲ್ಲ!' ಎಂದು ಮೇಜಿನ ಮೇಲಿದ್ದ ಹಳೇ ನ್ಯೂಜ್ ಪೇಪರ್ ಹರಿದುಕೊಟ್ಟು 'ಒರಿಸಿಕೊಳ್ರಿ' ಅಂದ.

'ಏನು ಮಾಡೋದು? ಫೋನು ಮಾಡಿದ್ರ ಫೋನ್ ಎತ್ತೋದಿಲ್ಲ, ಮಾರಾಯಾ, ಮುದ್ದಾಮ ಬರಬೇಕಾತು'

'ಕೂಡ್ರಿ, ಕೂಡ್ರಿ' ಅಂದ. ಪ್ರೊಫೆಸರ್ ಕೂಡತಾ, 'ಈಗ ಕೊರೊನಾ ಉಪಟಳ ಹೇಗೂ ಸೊಲ್ಪ ತಗ್ಗೇತಿ, ತಗಡಿನ ಷೀಟ್ ಹಾಕಿಕೊಟ್ಟುಬಿಡ್ರೆಲಾ' ಅಂದರು.

'ಧಾರವಾಡ ಮಂದಿ ತಮ್ಮ ಮನಿಗಳ ಛತ್ತುಗಳ ಮ್ಯಾಲೆ ಎಂಗೆಲ್ಸ್ ಹಾಕಿಸಿ ಮ್ಯಾಲೆ ತಗಡು ಹೊದಿಸಿ ಬಿಸಲಿಗೆ ಕಾಯೋದನ್ನ, ಮಳಿಗೆ ಸೋರೋದನ್ನ ತಡೆಗಟ್ಟೋ ಉಪಾಯ ಕಂಡುಕೊಂಡಿದ್ದನ್ನು ತಿಳಿದು ನಾವೂ ಹೀಂಗ ಮಾಡೋಣಂತ ಹೆಂಡತಿ ದುಂಬಾಲು ಬಿದ್ದಳು. ಇನ್ನೂ ಒಂದೀಟು ಮುಂದುವರೆದು ಸುತ್ತ ಗೋಡೆ ಕಟ್ಟಿಸಿ ತಗಡು ಹಾಕಿದ್ರ ರೂಮು ಆಗತಾವು, ಹುಡುಗರಿಗೆ ಬಾಡಿಗಿ ಕೊಡಬಹುದು, ಉಲುವು ಆಗತೈತಿ, ಅಂತ ಅಂದದ್ದಕ್ಕ ಗೋಡೆ ಕಟ್ಟಿಸಿದೆ. ಈಗ ಬಿಜಾಪುರದ ಬಾರಾ ಕಮಾನ ಆಗಿ ನಿಂತಾವು. ಈಗ ಏನಾಗೇತಿ ನೋಡ್ರಿ, ಒಂದು ವಾರದ ಹಿಂದ ಸತತ ಮಳಿ ಹಚ್ಚಿ ಹೊಡೀತಲ್ಲ, ಮಳಿನೀರು ಮಾಳಿಗಿ ಮ್ಯಾಲ ಗೋಡೆಗಳ ನಡುವ ನಿಂತು ಛತ್ತು ಸೋರತೊಡಗೇತಿ. ಈ ಮೊದಲು ಬರೀ ಹಸಿ ಹಿಡೀತಿತ್ತು ಛತ್ತು. ಈಗ ಮನಿಯಂತ ಮನೀನ ತಟಗುಡತೈತಿ. ಹೀಂಗ ಫಜೀತಿ ಆಗೇತಿ. ಶರೀಫರು ಹಾಡ್ಯಾರಲ್ಲ, ಸೋರುತಿಹುದು ಮನಿಯ ಮಾಳಿಗಿ ಅಂತ. ಶಬ್ದಶಃ ಹಾಂಗ ಆಗೇತಿ, ನೋಡ್ರಿ. ಎಪ್ಪತ್ತರ ಗಡಿ ದಾಟಿದ ನಾನು ಇದನ್ನೆಲ್ಲಾ ಮೈಮ್ಯಾಲೆ ಹಾಕ್ಕೋಬಾರದಂದ್ರೂ ಹಾಕ್ಕೊಂಡು ಒದ್ದಾಡತೊಡಗೀನಿ. ನನಗೀಗ ದಿಗಿಲು ಹುಟ್ಟಿಸಿದ್ದು ಗಣೇಶೋತ್ಸವದ ಗಣೇಶನಿಂದಲ್ಲ, ಗ್ಯಾರೇಜ ಗಣೇಶನಿಂದ' ಅಂದು ಗಣೇಶನ ಕಡೀಗೆ ನೋಡತಾ ಪ್ರೊಫೆಸರ್ ನಕ್ಕರು.

ಇದು ತನ್ನ ಕಡೀಗೇ ಬಿಡತಿರೋ ಬಾಣ ಅನಿಸಿತು.